# ಪ್ರೇರಣಾಗೀತೆ

**ಗಾಳಿಪಟ** – ಬಾಲ್ಯದ ದಿನಗಳಲ್ಲಿ ನಮ್ಮ ಮನೆಯಲ್ಲಿದ್ದ ಎಲ್ಲಾ ಆಟದ ವಸ್ತುಗಳಿಗಿಂತ ಗಾಳಿಪಟದ ಜೊತೆಗಿನ ಆಟ ಮಾತ್ರ ತೀರಾ ವಿಭಿನ್ನ. ಈ ಮಾತನ್ನ ಯಾಕ್ ಹೇಳ್ತಾ ಇದ್ದೀನಿ ಅಂದ್ರೆ, ಬೇರೆ ಆಟದ ವಸ್ತುಗಳು ಕೀ ಕೊಟ್ರೆ ಕುಣಿಯುತ್ತವೆ, ತಳ್ಳಿದ್ರೆ ಓಡುತ್ತವೆ, ಅದರಲ್ಲಿರೊ ದೀಪಗಳು ಮಿಣಿ ಮಿಣಿ ಮಿಂಚುತ್ತವೆ, ಏನೋ ಡಬ ಡಬ ಶಬ್ದ ಮಾಡುತ್ತವೆ. ಎಲ್ಲವೂ ನಮ್ಮನ್ನು ರಂಜಿಸೋಕೆ, ನಮ್ಮನ್ನ ಖುಷಿಯಾಗಿಡೋಕೆ ಈ ಜನ್ಮ ತಾಳಿದವೆನೋ ಅನ್ಸುತ್ತೆ...

ಆದರೆ, ಗಾಳಿಪಟ ಮಾತ್ರ ಪೂರ್ತಿ ತದ್ವಿರುದ್ಧ. ಅದು ನಮ್ಮ ಕೈಗೂ ಸಿಗದಷ್ಟು ದೂರ ಹಾರುತ್ತೆ. ಅದನ್ನು ಆದಷ್ಟು ದೂರ ಹಾರಿಸೋಕೆ ನಾವೇ ಕಷ್ಟಪಡ್ತೀವಿ, ಒದ್ದಾಡ್ತೀವಿ. ಅದರ ಸೂತ್ರ ಹಿಡ್ಕೊಂಡು ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಗಾಳಿ ಬೀಸೋ ಕಡೆ ಎಳೆದಾಡಿ, ಕಷ್ಟಪಟ್ಟು ಅದನ್ನು ಕಣ್ಣಿಗೆ ಕಾಣದಷ್ಟು ದೂರ ಕಳ್ಸುದ್ವಿ ಅಂದ್ರೆ ಅದೊಂತರಾ ನೆಮ್ಮದಿ. ನಾವೇ ಬಣ್ಣ ಬಳೆದ, ನಾವೇ ಅಂಟಿಸಿದ, ನಾವೇ ಸಿಂಗರಿಸಿದ, ನಾವೇ ಸೂತ್ರ ಹಿಡಿದ ಗಾಳಿಪಟವನ್ನ ನಮ್ಮ ಕೈಯಾರೆ ದೂರ ಹಾರಿ ಬಿಡೋದು ಇದ್ಯಲ್ಲಾ, ಅದೊಂದು ರೀತಿಯ ಮಹಾತ್ಯಾಗ ಅನ್ಸುತ್ತೆ ನನ್ಗೆ. ಅದೂ ಆ ಪುಟ್ಟ ವಯಸ್ಸಿನಲ್ಲಿ...

ಅಣ್ಣನು ಮಾಡಿದ ಗಾಳಿಪಟ ಹಾಡಿನ ಕೊನೆಯ ಮೂರು ಸಾಲಂತೂ... 'ಬೆದರದ ಬೆಟ್ಟದ ಗಾಳಿಪಟ, ದಾರವ ಜಗ್ಗಿ ದೂರದಿ ನುಗ್ಗಿ, ತಾರೆಯ ನಗಿಸುವ ಗಾಳಿಪಟ' ಜೀವನ್ಮುಖಿ ಸಾಲುಗಳಂತೆ, ಪ್ರೇರಣಾ ಗೀತೆಯಂತೆ ಅನಿಸುವುದು.

ಇಂಥ ಮಕ್ಕಳ ಗೀತೆಗಳು ಈಗಿನ ಕಾಲಕ್ಕೆ ಬಹಳ ಅನಿವಾರ್ಯ. ಪದ್ಯದಲ್ಲಿರುವ ಸಕಾರಾತ್ಮಕ ಸಾಲುಗಳು ಮಕ್ಕಳ ಯೋಚನಾಶಕ್ತಿಯನ್ನು ಗಟ್ಟಿಗೊಳಿಸುವುದಲ್ಲದೆ, ಎಂಥ ಸೋಲು ಹತಾಶೆಯನ್ನು ಮೀರಿ ನಿಲ್ಲಬಲ್ಲ ಶಕ್ತಿಯನ್ನು ತುಂಬುವುದರಲ್ಲಿ ಎರಡು ಮಾತಿಲ್ಲ.

**–ಡಿ. ಸತ್ಯಪ್ರಕಾಶ್**
ಚಲನಚಿತ್ರ ನಿರ್ದೇಶಕರು

